ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು(ಆಡಳಿತ) ರವರ ಕಾರ್ಯಾಲಯ ಕಲಬುರಗಿ

ಸಂಖ್ಯೆ:ಸಿ1(1)/ಆಡಳಿತ/ಪ್ರಾಶಾಶಿ/ಹಿಮುಶಿ/ಬಡ್ತಿ/119/2020-21 ದಿನಾಂಕ:18-03-2021

**ಅಧಿಸೂಚನೆ**

ವಿಷಯ:-ಕಲಬುರಗಿ ಜಿಲ್ಲೆಯ ವ್ಯಾಪ್ತಿಯ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ದಿನಾಂಕ:01-01-2021 ರಲ್ಲಿದ್ದಂತೆ ಸೇವಾ ಜೇಷ್ಠತೆ ಆಧಾರದ ಮೇರೆಗೆ ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ:-1)ಕರ್ನಾಟಕ ಸರ್ಕಾರಿ ನೌಕರರ(ಜೇಷ್ಠತಾ)ನಿಯಮಗಳು 1957 ನಿಯಮ(5) ರಂತೆ.

2)ಸರ್ಕಾರಿ ಪತ್ರ ಸಂಖ್ಯೆ:ಇಡಿ 202 ಎಸ್‌ಎಲ್‌ಬಿ 2014 ದಿನಾಂಕ:20-05-2014.

3)ಸರ್ಕಾರಿ ಪತ್ರ ಸಂಖ್ಯೆ:ಇಡಿ 152 ಎಲ್‌ಬಿಪಿ 2014 ದಿನಾಂಕ:20-05-2014.

4)ಸರ್ಕಾರದ ಪತ್ರ ಸಂಖ್ಯೆ:ಡಿ.ಪಿ.ಎ.ಆರ್186ಎಸ್.ಆರ್.ಎಸ್2018 ಬೆಂಗಳೂರು ದಿ:15-05-2019.

5)ಈ ಕಛೇರಿಯ ಅಧಿಸೂಚನೆ ದಿನಾಂಕ:08-02-2021, 18-03-2021.

6)ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ರವರ ಸುತ್ತೋಲೆ ಸಂಖ್ಯೆ: ಸಿ1(1)ಆಡಳಿತ/ಖಾಲಿ ಹುದ್ದೆ ಭರ್ತಿ/25/2020-21 ದಿನಾಂಕ:29-09-2020.

– * * * * * * –

ಕಲಬುರಗಿ ಜಿಲ್ಲೆಯ ವ್ಯಾಪ್ತಿಯ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ವೃಂದದ ದಿನಾಂಕ:01-01-2021 ರಲ್ಲಿದ್ದಂತೆ ಸೇವಾ ಜೇಷ್ಠತೆ ಆಧಾರದ ಮೇರೆಗೆ ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಿದ್ಧಗೊಳಿಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಕಟಿಸಲಾಗುತ್ತಿದೆ. ಸದರಿ ಪಟ್ಟಿಗೆ ಆಕ್ಷೇಪಣೆಗಳೇನಾದರೂ ಇದ್ದರೆ, ಸದರಿ ಆಕ್ಷೇಪಣೆಯನ್ನು ದಿನಾಂಕ:24-03-2021 ರಂದು ಕಛೇರಿ ಅವಧಿವರೆಗೆ ಸಲ್ಲಿಸಲು ಸೂಚಿಸಿದೆ. ಸದರಿ ಪಟ್ಟಿಯನ್ನು ಈ ಕಾರ್ಯಾಲಯದ ವೆಬ್‌ಸೈಟ್ (www.ddpikalaburgi.in)ದಲ್ಲಿ ಗಮನಿಸಬಹುದು.

1) ಮೂಲ ವೃಂದ, ಸ್ಥಳಿಯ ವೃಂದ ಮತ್ತು ಉಳಿದ ಮೂಲ ವೃಂದದ ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಮುಖ್ಯ ಶಿಕ್ಷಕರ ಸೇವಾ ಮಾಹಿತಿಯು ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಒದಗಿಸಿರುವ ಮಾಹಿತಿಯನ್ನಾಧರಿಸಿ ಜೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿದಂತೆ ಸಿದ್ಧಪಡಿಸಲಾಗಿದೆ.
2) ಮೂಲ ವೃಂದ, ಸ್ಥಳಿಯ ವೃಂದ ಮತ್ತು ಉಳಿದ ಮೂಲ ವೃಂದದ ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಮುಖ್ಯ ಶಿಕ್ಷಕರ ಸೇವಾ ವಿವರ ಮಾಹಿತಿ ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ಬಡ್ತಿ ಪಡೆದ ದಿನಾಂಕ ಮತ್ತು ಜೇಷ್ಠತಾ ಕ್ರಮಾಂಕಗಳ ಪರಿಶೀಲನೆಗೆ ಒಪ್ಪಿಸುವ ಷರತ್ತಿಗೆ ಒಳಪಟ್ಟಿದೆ.
3) ಮೂಲ ವೃಂದ, ಸ್ಥಳಿಯ ವೃಂದ ಮತ್ತು ಉಳಿದ ಮೂಲ ವೃಂದದ ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ದಾಖಲೆಗಳನ್ನು ಪರಿಶೀಲನೆಗೆ ಒಪ್ಪಿಸುವ ಷರತ್ತಿಗೆ ಒಳಪಟ್ಟಿದೆ. ಹಾಗೂ ಈ ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ತರಹದ ದೋಷಗಳನ್ನು ಕಂಡು ಬಂದಲ್ಲಿ ಅದನ್ನು ಸರಿಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.
4) ಈ ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ನಿಗದಿತ ಅವಧಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ನಿಗದಿತ ಅವಧಿಯಲ್ಲಿ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ ಈ ಮಾಹಿತಿ ಸರಿಯಿರುವುದು ಎಂದು ಪರಿಗಣಿಸಿ ಹಾಗೂ ಅದಕ್ಕೆ ಸಂಬಂಧಪಟ್ಟ ಮುಖ್ಯ ಶಿಕ್ಷಕರುಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜವಾಬ್ದಾರರನ್ನಾಗಿಸಿ ಈ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು.
5) ಆಕ್ಷೇಪಣೆಯನ್ನು ಸಲ್ಲಿಸುವವರು ಈ ಅಧಿಸೂಚನೆಯೊಂದಿಗೆ ನೀಡಲಾದ ನಮೂನೆಯಲ್ಲಿ ಎಲ್ಲಾ ಅಂಕಣದಲ್ಲಿ ಮಾಹಿತಿ ಭರಿಸಿ, ಮಾಹಿತಿಯನ್ನು ಪುಷ್ಠೀಕರಿಸುವ ದಾಖಲೆಗಳೊಂದಿಗೆ ಸಲ್ಲಿಸುವುದು.
6) ಈ ಅಂತಿಮ ತಾತ್ಕಾಲಿಕ ಪಟ್ಟಿಯಲ್ಲಿ ಯಾವುದೇ ನಮೂದುಗಳು/ಮಾಹಿತಿ ಸರಿ ಇರದೇ ಇದ್ದಲ್ಲಿ, ಸರಿಪಡಿಸಲು ಪುಷ್ಠೀಕರಿಸುವ ದಾಖಲೆಗಳೊಂದಿಗೆ ಆಕ್ಷೇಪಣೆಗಳನ್ನು ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ಇವರ ವಿಳಾಸಕ್ಕೆ ***ಸ್ಪೀಡ್ ಪೋಸ್ಟ*** ಮೂಲಕ ಅಥವಾ ನೇರವಾಗಿ ಈ ಕಾರ್ಯಾಲಯಕ್ಕೆ ದಿನಾಂಕ:24-03-2021 ರೊಳಗಾಗಿ ತಲುಪುವಂತೆ ಸಲ್ಲಿಸುವುದು. ನಿಗದಿತ ಅವಧಿಯೊಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸದೇ ಇದ್ದಲ್ಲಿ ಪ್ರಸ್ತುತ ಪ್ರಕಟಿಸಿದ ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಮಾಹಿತಿ ಸರಿಯೆಂದು ಪರಿಗಣಿಸಿ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು.

ಉಪ ನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಕಲಬುರಗಿ

ಗೆ,

1) ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2) ಈ ಕಛೇರಿಯ ಇ-ಗೌರ್ನರ್ಸ್‌ಕ್ಕೆ ಕೊಡುತ್ತಾ ಈ ಕಾರ್ಯಾಲಯದಲ್ಲಿ ವೆಬ್‌ಸೈಟ್‌ದಲ್ಲಿ ಪ್ರಕಟಿಸಲು ತಿಳಿಸಿದೆ.

ಪ್ರತಿಯನ್ನು:-

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆಯ ಸಚಿವಾಲಯ ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ಆಯುಕ್ತರು ಬೆಂಗಳೂರು ಹಾಗೂ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
3) ಮಾನ್ಯ ನಿರ್ದೇಶಕರು ಅಪರ ಆಯುಕ್ತರ ಕಛೇರಿ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
4) ಮಾನ್ಯ ಸಹ ನಿರ್ದೇಶಕರು(ಆಡಳಿತ) ಅಪರ ಆಯುಕ್ತರ ಕಛೇರಿ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.